ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 6 ನೇ ಪ್ರತಿವಾದಿ ಪರ ವಕೀಲರಿಂದ

ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಹೌದು. ನಮ್ಮ ತಂದೆಗೆ 3 ಜನ ಮಕ್ಕಳು. ನಾನು ಮೊದಲನೇಯಳು. ನನ್ನ ಮದುವೆ 1996 ರಲ್ಲಿ ಆಗಿರುತ್ತದೆ. ನನಗೆ ಬೆಂಗಳೂರಿನ ಗೌರಿಪಾಳ್ಯಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ. ಮದುವೆಯಾದಗಿನಿಂದ ನಾನು ಅಲ್ಲಿಯೇ ವಾಸವಿರುತ್ತೇನಾ ಎಂದರೆ ಅಲ್ಲಿ ಒಂದು ವರ್ಷ ಇದ್ದು ನಂತರ ಇಲ್ಲಿಗೆ ಬರುತ್ತಿದ್ದೇನೆ. ನಾನು ಮತ್ತು ನನ್ನ ಗಂಡ ಇಬ್ಬರು ಊರಿಗೆ ಬಂದಿರುತ್ತೇವೆ. ನನ್ನ ತಂಗಿ ಮತ್ತು ನನ್ನ ತಮ್ಮ ಎಲ್ಲರೂ ಒಟ್ಟಿಗೆ ವಾಸವಿರುತ್ತೇವಾ ಎಂದರೆ ಇಲ್ಲ ಬೇರೆ ಬೇರೆಯಾಗಿ ವಾಸವಿರುತ್ತೇನೆ. ನಾನು ಸ್ವಂತ ಮನೆಯಲ್ಲಿ ವಾಸವಿರುತ್ತೇನಾ ಎಂದರೆ ಇಲ್ಲ ಬಾಡಿಗೆ ಮನೆಯಲ್ಲಿ. ನಮ್ಮ ತಂದೆ ಸಹ ಬಾಡಿಗೆ ಮನೆಯಲ್ಲಿ ವಾಸವಿರುತ್ತಾರೆ. ನನ್ನ ತಮ್ಮ ವಿಜಯಕುಮಾರ್ ಎಲ್ಲಿ ಇರುತ್ತಾರೆ ಎಂದರೆ ಅವರು ನಮ್ಮ ತಂದೆ ತಾಯಿ ಜೊತೆ ಇರಬಹುದು, ಆದರೆ ಈ ಎಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂಗಿ ಕಾವ್ಯರವರನ್ನು ಬೆಂಗಳೂರಿನ ಹುಡುಗನಿಗೆ ಕೊಟ್ಟಿರಬಹುದು ನನಗೆ ಸರಿಯಾಗಿ ಗೊತ್ತಿಲ್ಲ. ಅವರು ನಮ್ಮ ಜೊತೆ ವಾಸ ಮಾಡುತ್ತಿಲ್ಲ ಎಂದರೆ ಹೌದು.

4 ನೇ ಪ್ರತಿವಾದಿ ಚೌಕಹಳ್ಳಿಯಲ್ಲಿ ವಾಸವಿದ್ದು ಅವರು ಸ್ವಂತ ಮನೆಯಲ್ಲಿ ವಾಸವಿರುತ್ತಾರೆ. ಅವರ ವಾಸದ ಮನೆಯ ದಾಖಲೆಗಳನ್ನು ನೋಡಿರುತ್ತೇನಾ ಎಂದರೆ ನೋಡಿದ್ದೇನೆ. ಆ ಮನೆಯಲ್ಲಿ ನಾವು ಭಾಗ ಕೇಳಿರುವುದಿಲ್ಲವಾ ಎಂದರೆ ಹೌದು ಕೇಳಿಲ್ಲ. 6 ಮತ್ತು 7 ನೇ ಪ್ರತಿವಾದಿಗೂ ಸಹ ಸ್ವಂತ ವಾಸದ ಮನೆ ಇದ್ದು ಅದರಲ್ಲೂ ಸಹ

ನಾವು ಭಾಗ ಕೇಳಿಲ್ಲ ಎಂದರೆ ಹೌದು. ನಾನು ಹಾಜರುಪಡಿಸಿರುವ ವಂಶವೃಕ್ಷವನ್ನು ಹೊರತುಪಡಿಸಿ ವೆಂಕಟಚಾಲಯ್ಯರವರು ಮಗಳ ಎಂದು ತೋರಿಸಲು ಬೇರೆ ಯಾವುದೇ ದಾಖಲೆ ಹಾಜರುಮಾಡಿಲ್ಲ ಎಂದರೆ ಹೌದು, ಆದರೆ ಟಿ ಸಿ ಇದೆ. ನಮ್ಮ ತಂದೆ ಮತ್ತು ಅಅವರ ಸಹೋದರರು ಈಗ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಹೌದು. ಅವರೆಲ್ಲರೂ ಸ್ವಂತ ಮನೆಗಳಲ್ಲೂ ವಾಸವಿದ್ದು ಅವರವರೇ ಖಾತೆ ಮತ್ತು ಕಂದಾಯ ಕಟ್ಟುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮದುವೆ ಮನೆಯಲ್ಲಿ ಮಾಡಿರುತ್ತಾರೆ. ಅಂದಾಜು ಎಷ್ಟು ಖರ್ಚು ಮಾಡಿರುತ್ತಾರೆ ಎಂದರೆ ನನ್ನ ಗಂಡನೇ ಮಾಡಿಕೊಂಡಿರುತ್ತಾರೆ. ದಾವೆ ಸಲ್ಲಿಸುವ ಸಮಯದಲ್ಲಿ ಗೋಪಹಳ್ಳಿ ಗ್ರಾಮದ ಸರ್ವೆ ನಂಬರ್ 369/ಪಿ1 ಮತ್ತು 321 ರ ಸ್ವತ್ತುಗಳಿಗೆ ಮಾತ್ರ ಸಲ್ಲಿಸಿರುತ್ತೇನೆ ಎಂದರೆ ಎಲ್ಲ ಸ್ವತ್ತುಗಳನ್ನು ಸೇರಿ ಮಾಡಿ ರುತ್ತೇನೆ. ಈ ಸ್ವತ್ತುಗಳಲ್ಲಿ ಯಾರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಅವರ ಅಣ್ಣ ತಮ್ಮಂದಿರಿ ಎಲ್ಲರೂ ವ್ಯವಸಾಯ ಮಾಡುತ್ತಿದ್ದಾರೆ ಆದರೆ ನಾನು ಮಾಡುತ್ತಿಲ್ಲ. ನಮ್ಮ ತಂದೆ ಮತ್ತು ಅವರ ಸಹೋದರರು ಯಾವ ಯಾವ ಸ್ವತ್ತಗಳಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಈ ಯಾರೂ ವ್ಯವಸಾಯ ಮಾಡುತ್ತಿಲ್ಲ ಮೊದಲು ಒಟ್ಟು ಕುಟುಂಬದಲ್ಲಿ ಮಾಡುತ್ತಿದ್ದರು.

ಗೋಪಹಳ್ಳಿ ಗ್ರಾಮದ ಸರ್ವೆ ನಂಬರ್ 369/ಪಿ1 ಮತ್ತು 321 ರ ಸ್ವತ್ತುಗಳನ್ನು ತಿದ್ದುಪಡಿ ಅರ್ಜಿ ಸಲ್ಲಿಸಿ ದಾವೆಯಿಂದ ತೆಗೆದು ಹಾಕಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ಅದೇ ವಿಚಾರವಾಗಿ ತಿದ್ದುಪಡಿ ವಾದ ಪತ್ರವನ್ನು ಸಹ ಸಲ್ಲಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. 4, 6 ಮತ್ತು 7 ನೇ ಪ್ರತಿವಾದಿಗಳು ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದಾರಾ

ಎಂದರೆ ಈಗ ಅವರು ಹೇಗೆ ಮಾಡುತ್ತಿದ್ದಾರೆ ಅಂತ ನನಗೆ ಗೊತ್ತಿಲ್ಲ.

ಈ ದಾವೆಯನ್ನು ನಮ್ಮ ತಂದೆ ಭಾಗದ 1/4 ನೇ ಭಾಗವನ್ನು ಮಾತ್ರ ಕೇಳಿರುತ್ತೇನೆ ಎಂದರೆ ಹೌದು. ನಮ್ಮ ತಂದೆ ಯಾವುದೇ ನ್ಯಾಯಾಲಯದಲ್ಲಿ ಭಾಗಕ್ಕಾಗಿ ಎಲ್ಲೂ ದಾವೆಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಹೌದು. ದಾವಾ ಸ್ವತ್ತುಗಳು ನಮ್ಮ ಕುಟುಂಬದ ಸ್ವತ್ತುಗಳು ಎಂದು ತೋರಿಸಲು ನಾನು ಟೈಟಲ್ ಡೀಡ್ ಅಥವಾ ಇತರೆ ದಾಖಲೆಗಳನ್ನು ಹಾಜರುಮಾಡಿರುತ್ತೇನಾ ಎಂದರೆ ಹಾಜರುಮಾಡಿಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದು ತೋರಿಸಲು ದಾಖಲೆ ಇರುತ್ತವಾ ಎಂದರೆ ಪಹಣಿ ಇರುತ್ತದೆ. ನಾನು ಹಾಜರುಪಡಿಸಿರುವ ನಿಪಿ-3 ರ ಕ್ರಯ ಪತ್ರದಂತೆ 4 ನೇ ಪ್ರತಿವಾದಿ ಮಾರಾಟ ಮಾಡಿರುವ ಸ್ವತ್ತು 4 ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ಬಂದಿರುತ್ತದೆ ಎಂದು ಒಕ್ಕಣೆ ಬರೆಸಿರುತ್ತಾರೆ ಎಂದರೆ ನನಗೆ ಆ ವಿಚಾರ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ನಿಪಿ-16 ರ ಕ್ರಯ ಪತ್ರದಲ್ಲಿನ ಸ್ವತ್ತು 7 ನೇ ಪ್ರತಿವಾದಿಗೆ ಅವರ ತಾಯಿ ದಾನ ಪತ್ರದಿಂದ ಬಂದಿರುವ ಸ್ವತ್ತು ಎಂದು ಬರೆಸಿರುತ್ತಾರೆ ಎಂದರೆ ಹೌದು. ನಾನು ಹಾಜರುಪಡಿಸಿರುವ ನಿಪಿ-5 ರ ಕ್ರಯ ಪತ್ರದಲ್ಲಿ ಸುಬ್ಬಮ್ಮನವರು ಅವರ ಸ್ವಯಾರ್ಜಿತ ಸ್ವತ್ತು ಎಂದು ನಮೂದಿಸಿರುತ್ತಾರೆ ಎಂದರೆ ಹೌದು. ನಿಪಿ-19 ದಾನ ಪತ್ರವನ್ನು 4 ನೇ ಪ್ರತಿವಾದಿಗೆ 1 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-19 ರಲ್ಲಿ 1 ನೇ ಪ್ರತಿವಾದಿ ಸದರಿ ಸ್ವತ್ತು ಸ್ವಯಾರ್ಜಿತವಾಗಿ ಬಂದ ಸ್ವತ್ತು ಎಂದು ಒಕ್ಕಣೆ ಬರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 6 ಮತ್ತು 7 ನೇ ಸ್ವತ್ತುಗಳನ್ನು ನಾವು ಯಾವ ಕಾರಣಕ್ಕೆ ದಾವೆಯಿಂದ ತೆಗೆದಿರುತ್ತೇವೆ ಎಂದರೆ ಅದು ಬೇರೆಯವರ ಸ್ವತ್ತುಗಳು ಎಂಬ ಕಾರಣ ತೆಗೆದಿರುತ್ತೇವೆ.

ದಾವಾ ಸ್ವತ್ತುಗಳಲ್ಲಿ ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪಂದಿರು ಬಾಯಿ ಮಾತಿನ ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಚಕ್ಕಬಂದಿ ಹೇಳಲು ಬರುತ್ತದಾ ಎಂದರೆ ಬರುವುದಿಲ್ಲ. ದಾವಾ ಸ್ವತ್ತುಗಳ ಬಗ್ಗೆ ಹಲವು ವ್ಯವಹಾರಗಳು ಮತ್ತು ಬದಲಾಣೆಯಾಗಿದ್ದರೂ ಸಹ ನಾನು ಈ ದಾವೆ ಸಲಿಲಸಿರುತ್ತಾನೆ ಎಂದರೆ ನನಗೆ ಈಗ ಗೊತ್ತಿಗಾಗಿದೆ. ದಾವಾ ಸ್ವತ್ತುಗಳ ಖಾತೆ ಬದಲಾಣೆಯಾದ ನಂತರ ನಾನು ರೆವಿನ್ಯೂ ಆಧಿಕಾರಿಗಳ ಕಛೇರಿಯಲ್ಲಿ ಪ್ರಶ್ನೆ ಮಾಡಿರುತ್ತೇನಾ ಎಂದರೆ ಇಲ್ಲ. ನಿಪಿ-16 ರ ದಾನ ಪತ್ರ ಆಗಿ 11 ವರ್ಷಗಳು ಆಗಿದ್ದು ಇಲ್ಲಿಯವರೆಗೊ ನನ್ನ ಗಮನಕ್ಕೆ ಬಂದಿರುವುದಿಲ್ಲವಾ ಎಂದರೆ ನನಗೆ ಈಗ ಗೊತ್ತಾಗಿರುತ್ತದೆ.

ನಾನು ಹಾಜರುಪಡಿಸಿರುವ ನಿಪಿ-1, 2, 17 ರಿಂದ 19 ರ ದಾಖಲೆಗಳ ಪ್ರಕಾರ ದಾನ ಪತ್ರ ಮತ್ತು ಕ್ರಯ ಪತ್ರಗಳ ಪ್ರಕಾರ ಅವರವರ ಸ್ವಾಧೀದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ, ನಮ್ಮ ತಂದೆಯ ಭಾಗಕ್ಕೆ ಬಂದ ಸ್ವತ್ತನ್ನು ಈಗಾಗಲೇ ಮಾರಾಟ ಮಾಡಿರುತ್ತಾರೆ ಎಂರೆ ನನಗೆ ಗೊತ್ತಿಲ್ಲ, ದಾವಾ ಸ್ವತ್ತುಗಳಲ್ಲಿ ಆಗಿರುವ ಎಲ್ಲಾ ವ್ಯವಹಾರಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಭಾಗದ ಹಕ್ಕು ಇಲ್ಲದೇ ಇದ್ದರೂ ಸಹ ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು 9 ಮತ್ತು 12 ನೇ ಪ್ರತಿವಾದಿ ಪರ ವಕೀಲರಿಂದಃ-</u>

ದಾವಾ ಸ್ವತ್ತುಗಳ ಪೈಕಿ ನಾನು ಎಷ್ಟು ಎಕರೆಗೆ ದಾವೆ ಸಲ್ಲಿಸಿರುತ್ತೇನೆ ಎಂದರೆ ನಿಖರವಾಗಿ ಗೊತ್ತಿಲ್ಲ ಆದರೆ ಅಂದಾಜು 10 ಎಕರೆ ಸ್ವತ್ತುಗಳಿಗೆ ನಾನು ದಾವೆ ಸಲ್ಲಿಸಿರುತ್ತೇನೆ. ದಾವಾ ಸ್ವತ್ತುಗಳ ಸರ್ವೇ ನಂಬರ್ ಮತ್ತು ವಿಸ್ತೀರ್ಣ ಹೇಳಲು ಬರುತ್ತದಾ ಎಂದರೆ ಸರ್ವೇ ನಂಬರ್ 319 ರಲ್ಲಿ 4 ಎಕರೆ ಚಿಲ್ಲರೆ ಗುಂಟೆ, ಸರ್ವೇ ನಂಬರ್ 131, ಉಳಿದ ಸ್ವತ್ತುಗಳ ಸರ್ವೇ ನಂಬರ್ ಮತ್ತು ಒಟ್ಟು ವಿಸ್ತೀರ್ಣ ಹೇಳಲು ಬರುವುದಿಲ್ಲ. ದಾವಾ ಸ್ವತ್ತುಗಳ ಸರ್ವೇ ನಂಬರ್ 319 ರಲ್ಲಿ ಎಷ್ಟು ಎಷ್ಟು ವಿಸ್ತೀರ್ಣ ಸ್ವತ್ತುಗಳು ಯಾರ ಯಾರ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ನನಗೆ ಹೇಳಲು ಬರುವುದಿಲ್ಲ. ನಾನು ಹಾಜರುಪಡಿಸಿರುವ ನಿಪಿ-20 ರಲ್ಲಿ ಗೋವರ್ಧನ್ ಎನ್ನುವವರ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ಹೌದು. ನಿಪಿ-20 ರ ಪಹಣಿ ಪತ್ರಿಕೆಯಲ್ಲಿ ಅವರ ಹೆಸರು ಯಾವ ವರ್ಷದಿಂದ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಅವರ ಹೆಸರು ನಿಪಿ-20 ರಲ್ಲಿ ಹೇಗೆ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನಾ ಎಂದರೆ ತಿಳಿದುಕೊಂಡಿಲ್ಲ.

ನನ್ನ ಗಂಡ ಮೊದಲು ಗೌರಿಪಾಳ್ಯದಲ್ಲಿ ಆಟೋ ಚಾಲನೆ ಮಾಡುತ್ತಿದ್ದು ಈಗ ವೈರಿಂಗ್ ಕೆಲಸ ಮಾಡುತ್ತಿದ್ದರು. ನನ್ನ ಗಂಡನಿಗೆ ಗೌರಿಪಾಳ್ಯದಲ್ಲಿ ಆಸ್ತಿ ಇತ್ತಾ ಎಂದರೆ ಹೌದು ಇತ್ತು. ನನ್ನ ಗಂಡನ ಹೆಸರಿನಲ್ಲಿ ಆಸ್ತಿ ಇತ್ತಾ ಎಂದರೆ ಇಲ್ಲ. ನನ್ನ ಮದುವೆ 1996 ರಲ್ಲಿ ನಮ್ಮ ಗ್ರಾಮದ ಛತ್ರದಲ್ಲಿ ಆಗಿರುತ್ತದೆ ಎಂದರೆ ಹೌದು. ಮದುವೆಯಾದಗಿನಿಂದ ನಾನು ಚೌಕಹಳ್ಳಿಯಲ್ಲಿ ವಾಸವಿರುತ್ತೇನೆ ಎಂದರೆ ಇಲ್ಲ ನನ್ನ ಗಂಡನ ಮನೆಯಲ್ಲಿ 1 ವರ್ಷ ಇದ್ದೆ ಆನಂತರ ಚೌಕಹಳ್ಳಿಗೆ ಬಂದಿರುತ್ತೇನೆ. ನನ್ನ ಗಂಡನ ಮನೆಯಲ್ಲಿ ಅನುಕೂಲ ಇಲ್ಲದೇ ನಾನು ಮತ್ತು ನನ್ನ ಗಂಡ ಚೌಕಹಳ್ಳಿಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ಮದುವೆಯ ಕಾಲಕ್ಕೆ ನಮ್ಮ ತಂದೆ ಏನು ಕೆಲಸ ಮಾಡಿಕೊಂಡಿದ್ದರು ಎಂದರೆ ವ್ಯವಸಾಯ ಮಾಡಿಕೊಂಡಿದ್ದರು. ನನ್ನ ಮದುವೆ ಸಮಯದಲ್ಲಿ ನಮ್ಮ ತಂದೆ ನನ್ನ ಮದುವೆಗೆ ಎಷ್ಟು ಖರ್ಚು ಮಾಡಿರುತ್ತಾರೆ ಎಂದರೆ ಅವರು ಖರ್ಚು ಮಾಡಿರುವುದಿಲ್ಲ. ಸಾಮಾನ್ಯವಾಗಿ ಅವರವರ ಅನೂಕೂಲಕ್ಕೆ ಅವರವರ ಗ್ರಾಮದಲ್ಲಿ ಮದುವೆ ಮಾಡಿಕೊಡುತ್ತಾರೆ ಎಂದರೆ ಹೌದು. ನಮ್ಮ ತಂದೆ ಸ್ವತಃ ಖರ್ಚು ಮಾಡಿ ಚೌಕಹಳ್ಳಿಯಲ್ಲಿ ನನ್ನ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ತಂದೆ ನಿಪಿ-20 ರ ಪ್ರಕಾರ ಸರ್ವೇ ನಂಬರ್ 319/5 ರಲ್ಲಿ 1 ಎಕರೆ ಜಮೀನನ್ನು ನನ್ನ ಮದುವೆ ಖರ್ಚಿಗಾಗಿ 9 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ನಿಪಿ-20 ರ ಪಹಣಿ ಪತ್ರಿಕೆಯಲ್ಲಿ ಬರುತ್ತಿರುವ 9 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಬಗ್ಗೆ ನಾನು ಕ್ರಯಪತ್ರ ವನ್ನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ ಎಂದರೆ ನನಗೆ ಗೊತ್ತಾಗುವುದಿಲ್ಲ. ನನ್ನ ಮದುವೆಗೆಗಾಗಿ ಸದರಿ ಸ್ವತ್ತನ್ನು ಮಾರಾಟ ಮಾಡಿರುವ ಕಾರಣ ನಾನು ಸದರಿ ಕ್ರಯ ಪತ್ರವನ್ನು ಹಾಜರುಮಾಡಿಲ್ಲ ಎಂದರೆ ಸುಳ್ಳು.

ಸರ್ವೇ ನಂಬರ್ 319/5 ರಲ್ಲಿ ಉಳಿಕ 3 ಎಕರೆ ಪೈಕಿ 1 ಎಕರೆ ಸ್ವತ್ತನಲ್ಲಿ ಮಂಜುನಾಥ ಎನ್ನುವವರು ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ಉಳಿಕೆ 2 ಎಕರೆ ಸ್ವತ್ತಿನಲ್ಲಿ ಮಲ್ಲೇಶ್ ಎನ್ನುವವರು ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 319/5 ರಲ್ಲಿ 1 ಎಕರೆ ಸ್ವತ್ತು ನಮ್ಮ ತಂದೆಯ ಭಾಗಕ್ಕೆ ಈಗಾಗಲೆ ಕೊಟ್ಟಿದ್ದರು ಮತ್ತು ಅದನ್ನು ನಮ್ಮ ತಂದೆ ನನ್ನ ಮದುವೆಗಾಗಿ ಮಾರಾಟ ಮಾಡಿರುವ ಕಾರಣ ನನಗೆ ಆ ಸ್ವತ್ತಿನಲ್ಲಿ ಯಾವುದೇ ಭಾಗದ ಹಕ್ಕು ಇಲ್ಲ ಎಂದರೆ ಇನ್ನು ಭಾಗ

ಆಗಿರುದಿಲ್ಲ ಎನ್ನುತ್ತಾರೆ. ನನ್ನ ಅಜ್ಜಿಯ ತಮ್ಮ ಸುಂದರಣ್ಣ ಎಂದರೆ ನನಗೆ ಗೊತ್ತಿಲ್ಲ. ನನ್ನ ಮದುವೆಗಾಗಿ ಸದರ ಸುಂದರಣ್ಣರವರ ಸಹ 1 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಸುಂದರಣ್ಣನ ಮಗಳನ್ನು ನಮ್ಮ ಚಿಕ್ಲಪ್ಪನ ಮಗನಾದ ಮಲ್ಲೇಶ್ ರವರಿಗೆ ಕೊಟ್ಟು ವಿವಾಹ ಮಾಡಿರುತ್ತಾರೆ ಎಂದರೆ ಹೌದು. ಆ ಮದುವೆ ಸಮಯದಲ್ಲಿ ನಮ್ಮ ಅಜ್ಜಿ, ನಮ್ಮ ತಂದೆ ಮತ್ತು ಚಿಕ್ಕಪ್ಪಂದಿರು ವರದಕ್ಷಿಣೆ ರೂಪದಲ್ಲಿ 1 ಎಕರೆ ಜಮೀನು ಕೊಟ್ಟಿರುತ್ತಾರೆ ಎಂದರೆ ಸುಳ್ಳು.

ಸರ್ವೇ ನಂಬರ್ 132/2 ಎರಲ್ಲಿ ಎಷ್ಟು ಎಕರೆ ಜಮೀನು ಇರುತ್ತದೆ ಎಂದರೆ ನಿಖರವಾಗಿ ಗೊತ್ತಿಲ್ಲ ಆದರೆ 38 ಗುಂಟೆ ಇರಬಹುದು. ನಾನು ಹಾಜರುಪಡಿಸಿರುವ ನಿಪಿ-22 ರ ಪಹಣಿ ಯಾರ ಹೆಸರಿನಲ್ಲಿ ಬರುತ್ತಿದೆ ಎಂದರೆ 9 ನೇ ಪ್ರತಿವಾದಿ ಹೆಸರಿನಲ್ಲಿ ಬರುತ್ತಿದೆ. ನನ್ನ ತಂಗಿಯ ಮದುವೆ ಯಾವಾಗ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ತಂಗಿಯ ಮದುವೆಗೆ ಹೋಗಿರುವುದಿಲ್ಲವಾ ಎಂದರೆ ಹೋಗಿರುವುದಿಲ್ಲ. ನಾನು ಮತ್ತು ನಮ್ಮ ತಂದೆ ಚನ್ನಾಗಿ ಇರುವುದಿಲ್ಲವಾ ಎಂದರೆ ಹೌದು. ನಾನು ಮತ್ತು ನಮ್ಮ ತಂದೆ ಎಷ್ಟು ವರ್ಷಗಳಿಂದ ಮಾತನಾಡುತ್ತಿಲ್ಲ ಎಂದರೆ ಹೇಳಲು ಬರುವುದಿಲ್ಲ. ನಾನು ಮತ್ತು ನಮ್ಮ ತಂದೆ ಬಿಡದಿಯಲ್ಲಿ ಪ್ರತ್ಯೇಕವಾಗಿ ವಾಸವಿರುತ್ತೇವೆ. ನನ್ನ ತಂಗಿ ಕಾವ್ಯಳ ಮದುವೆ 2008 ರಲ್ಲಿ ಆಗಿರುತ್ತದೆ ಎಂದರೆ ಇರಬಹುದು. ನನ್ನ ತಂಗಿ ಮದುವೆಗೆ ಹಣದ ಅವಶ್ಯಕತೆ ಇದ್ದ ಕಾರಣ ನಮ್ಮ ತಂದೆ, ತಾಯಿ ಮತ್ತು ಸಹೋದರರು ನಿಪಿ-16 ರ ಪ್ರಕಾರ ಸರ್ವೇ ನಂಬರ್ 132/2 ರ 13 ಗುಂಟೆ ಸ್ವತ್ತನ್ನು ದಿನಾಂಕ 11.01.2009 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನಮ್ಮ ತಂದೆಗೆ ಇನ್ನು ಹಣದ

ಅವಶ್ಯಕತೆ ಇದ್ದ ಕಾರಣ ಮಾರನೇ ದಿನ ಸರ್ವೇ ನಂಬರ್127 ರಲ್ಲಿ 1 ಎಕರೆ 4 ವರೆ ಗುಂಟೆ ಮಾರಾಟ ಮಾಡಲು ಅಗ್ರಿಮೆಂಟ್ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಗ್ರಿಮೆಂಟ್ ಗೆ ಸುಬ್ಬಮ್ಮ, ನಮ್ಮ ತಂದೆ, 4, 6 ಮತ್ತು 7 ನೇ ಪ್ರತಿವಾದಿಗಳು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳನ್ನು ನನ್ನ ಮತ್ತು ನನ್ನ ತಂಗಿ ಮದುವೆಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು.

ಸರ್ವೇ ನಂಬರ್ 129/5 ರಲಿ 1 ಎಕರೆ 11 ಗುಂಟೆ ವಿಸ್ತೀರ್ಣ ಜಮೀನು ಇದೆ ಎಂದರೆ ಹೌದು.ಸದರಿ ಸ್ವತ್ತಿನಲ್ಲಿ ಮೊದಲೇ ಭಾಗವಾಗಿ ತಲಾ 25 ವರೆ ಗುಂಟೆ 6 ಮತ್ತು 7 ನೇ ಪ್ರತಿವಾದಿ ಹೆಸರುಗಳಿಗೆ ಪಹಣಿ ಬರುತ್ತಿದೆ ಎಂದರೆ ಸರಿಯಲ್ಲ. ನಿಪಿ-19 ರ ದಾಖಲೆಯ ಪ್ರಕಾರ ನಮ್ಮ ತಂದೆ ನನ್ನ ತಂಗಿಯ ಮದುವೆಗಾಗಿ 4 ನೇ ಪ್ರತಿವಾದಿಗೆ ದಾನ ಪತ್ರ ಬರೆದುಕೊಟ್ಟಿದ್ದು ಹಣ ಪಡೆದುಕೊಂಡಿರುತ್ತಾರೆ ಎಂದರೆ ಸುಳ್ಳು.

ಸರ್ವೇ ನಂಬರ್ 131/1 ಬಿ2 ರಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಆ ಸ್ವತ್ತು ಯಾರ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ್ 128/2 ರಲ್ಲಿ 30 ಗುಂಟೆ ಸ್ವತ್ತು ಯಾರ ಹೆಸರಿನಲ್ಲಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಎಲ್ ಪಿ ಶೈಲಜಾ ರವರ ಹೆಸರಿನಲ್ಲಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಯಾವಾಗ, ಯಾರು ಮತ್ತು ಯಾವ ಕಾರಣಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ ಪಿ ಶೈಲಜಾರವರ ಹೆಸರಿಗೆ ಆಗಿರುವ ಬಗ್ಗೆ ಕ್ರಯ ಪತ್ರವನ್ನು ಹಾಜರುಮಾಡಿರುತ್ತೇನಾ ಎಂದರೆ ಹಾಜರುಮಾಡಿರುತ್ತೇನೆ. ಆ ರೀತಿ ನಾನು ಕ್ರಯ ಪತ್ರವನ್ನು ಹಾಜರುಮಾಡಿಲ್ಲದೇ ಇದ್ದರೂ ಸಹ ಸುಳ್ಳು

ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು 4 ನೇ ಪ್ರತಿವಾದಿ 11 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಸಹ ಅವರ ಮಗಳ ಮದುವೆ ಖರ್ಚಿಗಾಗಿ 11 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೇ ನಂಬರ್ 131/1 ಬಿ2 ರ ಸ್ವತ್ತು ಯಾರ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ರಜಿನಿ. ರಜಿನಿರವರಿಗೆ ಯಾರು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ್ 131/1 ಬಿ2 ರ ಸ್ವತ್ತಿನ ಪಹಣಿ ಸುಮಿತ್ರಮ್ಮನವರ ಹೆಸರಿಗೆ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ್ 131/1 ಬಿ2 ರ ಸ್ವತ್ತನ್ನು ಸಹ 4 ನೇ ಪ್ರತಿವಾದಿಗೆ ಅವರ ಮಗಳ ಮದುವೆಗಾಗಿ ಸುಮಿತ್ರಮ್ಮನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಮತುತ ನಮ್ಮ ಚಿಕ್ಕಪ್ಪಂದಿರ ನಡುವೆ ಸುಮಾರು 25 ವರ್ಷಗಳ ಹಿಂದೆಯೇ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಭಾಗದ ಪ್ರಕಾರ ಅವರವರೇ ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸುಳ್ಳು. ನಮ್ಮ ಕುಟುಂಬಕ್ಕೆ ವ್ಯವಸಾಯ ಬಿಟ್ಟು ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಹೌದು. ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪ ಅವರ ಹೆಣ್ಣು ಮಕ್ಕಳ ಮದುವೆಗಾಗಿ 9 ಮತ್ತು 12 ನೇ ಪ್ರತಿವಾದಿ ಕೆಲವು ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೇ ನಂಬರ್ 127 ರಲ್ಲಿ 1 ಎಕರೆ 4 ಗುಂಟೆ ಸ್ವತ್ತನಲ್ಲಿ ಮಲ್ಲೇಶ್ ರವರ ಮನೆ ಕಟ್ಟಿರುತ್ತಾರೆ ಎಂದರೆ ಹೌದು. ಸದರಿ ಸ್ವತ್ತಿನಲ್ಲಿ 4 ಜನರಿಗೆ ಭಾಗ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ್ 127 ರಲ್ಲಿ

ಓಎಸ್ ನಂ. 243/2014 ರಲ್ಲಿ
ಪಿಡಬ್ಲ್ಯೂ -1(ಮಾಲತಿ)

ಕೆಲವು ವಿಸ್ತೀರ್ಣದ ಸ್ವತ್ತುಗಳನ್ನು ಮಾರಾಟ ಮಾಡಿದ್ದು ಉಳಿಕೆ ಸ್ವತ್ತಿನಲ್ಲಿ ನಮ್ಮ ತಂದೆ 11 ಗುಂಟೆ ಭಾಗ ಕೊಟ್ಟಿರುತ್ತಾರೆ ಎಂದರೆ ಭಾಗ ಆಗಿರುವುದೇ ಇಲ್ಲ. ನಿಪಿ-18 ರ ಕ್ರಯಪತ್ರದಂತೆ ರಜಿನಿರವರೇ ಸ್ವತ್ತಿನಲಿಲ ಸ್ವಾಧೀನದಲ್ಲಿ ಇದ್ದು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ದಾವಾ ಸ್ವತ್ತುಗಳಲ್ಲಿ ಈಗಾಗಲೇ ಭಾಗ ಕೊಟ್ಟಿದ್ದರೂ ಸಹ 9 ಮತ್ತು 12 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ದಾವೆ ಸಲ್ಲಿಸಿ ಸುಳುಳ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 9 ಮತ್ತು 12 ನೇ ಪ್ರತಿವಾದಿಗಳು ಆ ಕಾಲಕ್ಕೆ ಮಾರುಕಟ್ಟೆ ಬೆಲೆ ಕೊಟ್ಟು ಸ್ವತ್ತುಗಳನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಕೊಡಬೇಕಾದ ಭಾಗವನ್ನು ಈಗಾಗಲೇ ಕೊಟ್ಟಿದ್ದರೂ ಸಹ ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಎನ್ ಎಸ್ ಕುಲಕರ್ಣಿ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.